**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಎಮ್.ವಿ.ಸಿ. ನಂ. 1130/2019.**

**ಆರ್ ಡಬ್ಲ್ಯೂಃ 1**

| | | |
|---|---|---|
| ಹೆಸರು | : | ಶರಣಬಸವ ವೀರಪ್ಪಣ್ಣನವರ |
| ತಂದೆಯ ಹೆಸರು | : | ರುದ್ರಪ್ಪ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಆಡಳಿತ ಅಧಿಕಾರಿ ಯುನೈಟೆಡ್ ವಿಮಾ ಕಂಪನಿ ದಾವಣಗೇರಿ |
| ವಾಸಸ್ಥಳ | : | ದಾವಣಗೆರೆ |

**ದಿನಾಂಕಃ 05-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಪಿಸಿಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ನಿಜ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ನನ್ನ ಸಹಿ ಇರುತ್ತದೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ**

ಸದರಿ ಈ ಪ್ರಕರಣದಲ್ಲಿ ನಮೂದಿಸಿದ ಅಪಘಾತ ಬೀಕರವಾದ ಅಪಘಾತ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಹಾಲಯ್ಯ ಚನ್ನಬಸಯ್ಯ ಹಿರೇಮಠ ಎಂಬುವರು ತೀರಿಕೊಂಡರು ಎಂದರೆ ಪೋಲೀಸ ದಾಖಲೆಗಳ ಪ್ರಕಾರ ಸರಿ ಇದೆ ಎನ್ನುತ್ತಾರೆ. ಸದರಿ ಹಾಲಯ್ಯ ಚನ್ನಬಸಯ್ಯ ಹಿರೇಮಠರವರ ವಾರಸುದಾರರು ಎಮ್‌ವಿಸಿ ಸಂಖ್ಯೆ 37/2020 ನೇದ್ದರ ಹಾವೇರಿಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾಖಲಿಸಿದ್ದು ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಸದರಿ ಹಾಲಯ್ಯ ಚನ್ನಬಸಯ್ಯ ಹಿರೇಮಠ ಹೆಂಡತಿಗೆ ಮತ್ತು ಹನುಮಂತಪ್ಪ ತೀರಕಪ್ಪ ನಾಯ್ಕರ ಅಂದರೆ ಈ ಪ್ರಕರಣದ ಮೂಲ ಅರ್ಜಿದಾರನಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ತೀರ್ವ

ಸ್ವರೂಪದ ಗಾಯಗಳು ಆಗಿಲ್ಲ ಎನ್ನುತ್ತಾರೆ. ಸದರಿ ಅಪಘಾತದ ಸಮಯದಲ್ಲಿ ಮೋಟರ ಸೈಕಲ್ ಸಂಖ್ಯೆ ಕೆಎ-31 ಎಕ್ಸ 3814 ನೇದ್ದಕ್ಕೆ ನಮ್ಮ ಕಂಪನಿಯ ವಿಮಾ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ಮೋಟರ ಸೈಕಲ್ ಚಾಲಕನಿಗೆ ಸದರಿ ಸಮಯದಲ್ಲಿ ಊರ್ಜಿತವಾದ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ಸರಿ ಅಲ್ಲ. ಆತನಿಗೆ ಊರ್ಜಿತವಾದ ಚಾಲನಾ ಪರವಾನಿಗೆ ಪತ್ರ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ. ಆತನಿಗೆ ಊರ್ಜಿತವಾದ ಚಾಲನಾ ಪರವಾನಿಗೆ ಪತ್ರ ಇದ್ದಿದ್ದರಿಂದ ಪೋಲೀಸರು ಆ ಬಗೆಗಿನ ಕಲಂಗಳನ್ನು ದೋಷಾರೋಪಣ ಪಟ್ಟಿಯಲ್ಲಿ ಅಳವಡಿಸಿಲ್ಲ ಎಂದರೆ ಸರಿಅಲ್ಲ. ಸದರಿ ಅಪಘಾತ ಮೋಟರ ಸೈಕಲ್ ಸಂಖ್ಯೆ ಕೆಎ-31 ಎಕ್ಸ 3814 ನೇದ್ದರ ಚಾಲಕನ ತಪ್ಪಿನಿಂದ ಸಂಬವಿಸಿದೆ ಎಂದರೆ ಸರಿಅಲ್ಲ.

2. ಸದರಿ ಮೋಟರ ಸೈಕಲ್ ಸಂಖ್ಯೆ ಕೆಎ-31 ಎಕ್ಸ 3814 ಸದರಿ ಅಫಘಾತವಾದ ದಿನ ಬ್ಯಾಡಗಿಯಿಂದ ಕದರಮಂಡಲಗಿಗೆ ಹೋರಟಿತ್ತು ಎಂದರೆ ಸರಿ. ಹಾಗೂ ಸದರಿ ಸಮಯದಲ್ಲಿ ಇನ್ನೊಂದು ಮೋಟರ ಸೈಕಲ್ ಸಂಖ್ಯೆ ಕೆಎ-27 ಇಇ 5212 ಕದರಮಂಡಲಗಿಯಿಂದ ಬ್ಯಾಡಗಿ ಕಡೆಗೆ ಬರುತ್ತಿತ್ತು ಎಂದರೆ ಸರಿ. ಸದರಿ ಅಪಘಾತ ಕದರಮಂಡಲಗಿಯಿಂದ ಬ್ಯಾಡಗಿಗೆ ಹೋಗುವ ರಸ್ತೆಯ ಎಡಭಾಗದ ಅಂಚಿನಲ್ಲಿ ಆಗಿದೆ ಎಂದು ನಿಪಿ-3 ರಲ್ಲಿ ತೋರಿಸಲಾಗಿದೆ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ನಿಪಿ-3 ನಕಾಶೆಯಲ್ಲಿ ಸದರಿ ಅಪಘಾತ ರಸ್ತೆಯ ಎಡಭಾಗದಲ್ಲಿ ಆಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿಅಲ್ಲ. ಸದರಿ ಅಪಘಾತ ಮೋಟರ ಸೈಕಲ್ ಸಂಖ್ಯೆ ಕೆಎ-31 ಎಕ್ಸ 3814 ನೇದ್ದರ ಸವಾರನಿಂದ ಸಂಬವಿಸಿದೆ ಎಂದರೆ ಸರಿಅಲ್ಲ. ಪೋಲೀಸರು ಸದರಿ ಪ್ರಕರಣದಲ್ಲಿ ಸಲ್ಲಿಸಿದ ಅಂತಿಮ ವರದಿಯನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿ.

3. ಸದರಿ ಅಪಘಾತದಲ್ಲಿ ಮೂಲ ಅರ್ಜಿದಾರನಿಗೆ ತೀರ್ವ ಸ್ವರೂಪದ ಗಾಯಗಳು ಆಗಿದ್ದರಿಂದ ಆತ 2 ತಿಂಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ ಎಂದರೆ ಆ ಬಗ್ಗೆ ದಾಖಲೆಗಳು ಇಲ್ಲ ಎನ್ನುತ್ತಾರೆ. ಆತನಿಗೆ 2-3 ಬಾರಿ ಶಸ್ತ್ರ ಚಿಕಿತ್ಸೆ ಆಗಿದೆ ಎಂದರೆ ಆ ಬಗ್ಗೆ ದಾಖಲೆಗಳು ಇಲ್ಲ ಎನ್ನುತ್ತಾರೆ. ಆ ಬಗೆಗಿನ ದಾಖಲೆಗಳನ್ನು ಅರ್ಜಿದಾರರು ಕಳೆದುಕೊಂಡಿದ್ದರಿಂದ ಕಿಮ್ಸ

ಆಸ್ಪತ್ರೆಯಿಂದ ಮೂಲ ದಾಖಲೆಗಳನ್ನು ತರಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ದಿಃ 09-12-2018 ರಂದು ಸದರಿ ಅಪಘಾತವಾಗಿದೆ ಎಂದರೆ ಸರಿ. ಸದರಿ ಅಪಘಾತ ಸಂಬವಿಸಿ ಕೇಲವೆ ದಿನಗಳ ಕೋವಿಡ ಪ್ರಾರಂಭಿಸಿತ್ತು ಎಂದರೆ ಸರಿಅಲ್ಲ. ಸದರಿ ಸಮಯದಲ್ಲ್ಲಿ ಕೋವಿಡ್ ಬಂದಿದ್ದರಿಂದ ಆತನಿಗೆ ಯಾವುದೇ ಚಿಕಿತ್ಸೆ ಸರಿಯಾಗಿ ಸಿಗಲಿಲ್ಲ ಎಂದರೆ ಸರಿಅಲ್ಲ. ಆತನಿಗೆ ಸರಿಯಾದ ಚಿಕಿತ್ಸೆ ಸಿಗದೆ ಇದ್ದುದ್ದರಿಂದ ಆತ ನೋವು ತಾಳಲಾರದೆ ದಿಃ 21-05-2021 ರಂದು ವಿಷ ಸೇವಿಸಿ ತೀರಿಕೊಂಡ ಎಂದರೆ ಸಾಕ್ಷಿ ಆತ ವಿಷ ಸೇವಿಸಿದ ಬಗ್ಗೆ ದಾಖಲೆಗಳು ಇವೆ ಆದರೆ ಆತ ಅಪಘಾತದಿಂದ ಆದ ನೋವಿನಿಂದ ವಿಷ ಸೇವಿಸಿಲ್ಲ ಎನ್ನುತ್ತಾರೆ. ವೈದ್ಯರು ಆತ ಅಪಘಾತದಿಂದಾಗಿ ಆದ ಗಾಯಗಳಿಂದ ಆದ ನೋವನ್ನು ತಾಳಲಾರದೆ ವಿಷ ಸೇವಿಸಿರುತ್ತಾನೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಅಲ್ಲ. ಹಾಗೂ ಆ ಬಗ್ಗೆ ವೈದ್ಯರು ಮರಣೋತ್ತರ ಪರೀಕ್ಷೆ ಮಾಡಿ ವರದಿ ನೀಡಿರುತ್ತಾರೆ ಎಂದರೆ ಸರಿಅಲ್ಲ. ಅದೇ ರೀತಿ ಪೋಲೀಸರು ಸಹ ಯುಡಿಆರ್ ಪ್ರಕರಣ ಸಂಖ್ಯೆ 24/2021 ರಲ್ಲಿ ಆತ ಅಪಘಾತದಿಂದಾಗಿ ಆದ ಗಾಯಗಳಿಂದ ಆದ ನೋವನ್ನು ತಾಳಲಾರದೆ ವಿಷ ಸೇವಿಸಿರುತ್ತಾನೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಅಲ್ಲ. ನಾವು ಯುಡಿಆರ್ ಪ್ರಕರಣ ಸಂಖ್ಯೆ 24/2021 ರಲ್ಲಿನ ವರಿದಿಯನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ಮೂಲ ಅರ್ಜಿದಾರ ಸದರಿ ಅಪಘಾತದಲ್ಲಿ ಗಾಯಗೊಂಡು ಸದರಿ ಗಾಯಗಳು ನೋವಿನಿಂದ ತೀರಿಕೊಂಡಿರುತ್ತಾನೆ ಎಂದರೆ ಸರಿಅಲ್ಲ. ಹಾಗಾಗಿ ನಾವು ಮೂಲ ಅರ್ಜಿದಾರನ ವಾರಸುದಾರರಿಗೆ ಆತನ ಮರಣಕ್ಕೆ ಸಂಬಂಧಿಸಿದಂತೆ ಪರಿಹಾರ ನೀಡಲು ಬಾಧ್ಯಸ್ಥರು ಎಂದರೆ ಸರಿಅಲ್ಲ. ಅರ್ಜಿದಾರರಿಗೆ ಪರಿಹಾರ ನೀಡಬೇಕಾಗುತ್ತದೆ ಎಂದು ತಿಳಿದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಸಹಿ/- 05/08/2025

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ

ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.